## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾನಗಲ್

## ಸಿ. ಸಿ. ನಂ.**1190/2024**

| | | | |
|---|---|---|---|
| ಸಾಕ್ಷಿಧಾರರ ಹೆಸರು | : ರೇಷ್ಮಾ ಬಿ ಕೆ | ಪಿಡಬ್ಲ್ಯೂ | **4** |
| ತಂದೆ॰ಗಂಡನ ಹೆಸರು | : ಬರಗಿ ಕೆರೆಯಪ್ಪ | ಸಿಡಬ್ಲ್ಯೂ | **1** |
| ವಯಸ್ಸು | : 32 ವರ್ಷ | | |
| ಉದ್ಯೋಗ | : ಅಬಕಾರಿ ಉಪ ನೀರಿಕ್ಷಕಿ | | |
| ವಾಸಸ್ಥಳ | : ಹಾನಗಲ್ | | |

ದಿನಾಂಕ 01.07.2026 ರಂದು ಸಾಕ್ಷಿಧಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ॰ ಸಹಾಯಕ ಸರಕಾರಿ ಅಭಿಯೋಜಕರಿಂದ

ದಿನಾಂಕ 18.03.2022 ರಿಂದ ಇಲ್ಲಿಯವರೆಗೆ ಅಬಕಾರಿ ಉಪ ನೀರಿಕ್ಷಕರು ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2.ದಿನಾಂಕ 10.04.2024 ರಂದು ಸಾವ್ರರ್ತಿಕ ಲೋಕಸಭಾ ಚುನಾವಣಾ ನಿಮಿತ್ತ ಅಬಕಾರಿ ಉಪಆಯುಕ್ತರು ಹಾಗೂ ಅಬಕಾರಿ ಉಪ ಅಧೀಕ್ಷಕರು ಹಾಗೂ ಅಬಕಾರಿ ನೀರಿಕ್ಷಕರ ಮಾರ್ಗದರ್ಶನದಲ್ಲಿ ಮಹಾರಾಜಪೇಟೆ ಗ್ರಾಮದಲ್ಲಿ ನಾನು ಮತ್ತು ಚಾಸಾ-4 ರವರು ರಾತ್ರಿ 8.00 ಗಂಟೆ ಸಮಯದಲ್ಲಿ ಮಹಾರಾಜಪೇಟೆ ಬಸ್ ನಿಲ್ದಾಣ ಹತ್ತಿರ ನಿಟಗಿನಕೊಪ್ಪ ಗ್ರಾಮದ ರಾಜು ಹನುಮಂತಪ್ಪ ಓಣಿಕೇರಿ ಅವರ ಮನೆಯಲ್ಲಿ ಅಕ್ರಮವಾಗಿ ಮದ್ಯ ಸಂಗ್ರಹಿಸಿ ಮಾರಾಟ ಮಾಡಲಾಗುತ್ತಿದೆ ಎಂದು ಖಚಿತ ಮಾಹಿತಿ ಬಂದಿದ್ದು ಮಾಹಿತಿ ಪರಿಶೀಲಿಸುವ ಸಂಬಂಧ ಅಲ್ಲೇ ಇದ್ದ ಇಬ್ಬರು ಪಂಚರಾದ ಚಾಸಾ-2 ಮತ್ತು 3 ರವರನ್ನು ಪಂಚರಾಗಿ ಬರ ಮಾಡಿಕೊಂಡು ನನಗೆ ಬಂದ ಮಾಹಿತಿಯನ್ನು ಅವರಿಗೆ ತಿಳಿಸಿ ಅವರು ಪಂಚರಾಗಲು ಒಪ್ಪಿಕೊಂಡ ಮೇರೆಗೆ ನಮ್ಮ ಇಲಾಖಾ ವಾಹನದಲ್ಲಿ ಕೆಎ-27 ಜಿ-0462 ರಲ್ಲಿ ಕೂರಿಸಿಕೊಂಡು ನಾನು ಚಾಸಾ-2 ರಿಂದ 4 ರವರು ಸೇರಿ ನಿಟಗಿನಕೊಪ್ಪ ಗ್ರಾಮದ ಆರೋಪಿಯ ಮನೆಯ ಮುಂದೆ ಹೋಗಿ ವಾಹನ ನಿಲ್ಲಿಸಿ ಶೋಧನಾ ಸಮುಚಿತ ವರದಿಯನ್ನು ತಯಾರಿಸಿ ಪಂಚರೊಂದಿಗೆ ಮತ್ತು ಚಾಸಾ-4 ರವರೊಂದಿಗೆ ಆರೋಪಿಯ

ಮನೆಯ ಮುಂದೆ ಹೋಗಿ ಯಾರು ಇದ್ದೀರಾ ಎಂದು ಕೇಳಲಾಗಿ ಒಬ್ಬ ವ್ಯಕ್ತಿ ಮನೆಯಿಂದ ಹೋರಗೆ ಬಂದಿದ್ದು ಆತನ ಹೆಸರು ಕೇಳಲಾಗಿ ರಾಜು ಹನುಮಂತಪ್ಪ ಓಣಿಕೇರಿ ಅಂತಾ ಹೇಳಿದ್ದು ಆತನಿಗೆ ಬಂದ ವಿಷಯ ತಿಳಿಸಿ ಮನೆಯನ್ನು ಶೋಧಿಸಲಾಗಿ ಮನೆಯ ಹಾಲ್ ನಲ್ಲಿ ಹಳದಿ ಬಣ್ಣದ ಗೊಬ್ಬರದ ಚೀಲದಲ್ಲಿ 90 ಎಮ್ ಎಲ್ ನ ಒಟ್ಟು 120 ಓರಿಜಿನಲ್ ಚಾಯ್ಸ್ ಟೆಟ್ರಾ ಪ್ಯಾಕುಗಳು ಇದ್ದು ಇವುಗಳನ್ನು ಹೊಂದಲು ಪರವಾನಿಗೆ ಇದೆಯಾ ಎಂದು ಕೇಳಲಾಗಿ ಅವನು ಉತ್ತರಿಸುವುದಿಲ್ಲ. ನಂತರ ದೊರೆತ ಮು.ಮಾಲು ಮತ್ತು ಆರೋಪಿಯನ್ನು ವಶಕ್ಕೆ ಪಡೆದು ಜಪ್ತಿ ಪಡಿಸಿಕೊಂಡು ಒಟ್ಟು ಮುದ್ದೆಮಾಲುಗಳಲ್ಲಿ ರಾಸಾಯನಿಕ ಪರೀಕ್ಷೆಗಾಗಿ ಸಂಗ್ರಹಿಸಿ, 90 ಎಂ ಎಲ್ ನ 30 ಓ ಸಿ ವಿಸ್ಕಿ ಟೆಟ್ರಾ ಪ್ಯಾಕುಗಳು ಬಿಳಿ ಬಟ್ಟೆಯಿಂದ ಸುತ್ತಿ, ದಾರವನ್ನು ಕಟ್ಟಿ ಸರಕಾರಿ ಮೊಹರಿನಿಂದ ಶೀಲು ಮಾಡಲಾಯಿತು. ಅದಕ್ಕೆ ನನ್ನ ಮತ್ತು ಚಾಸಾ-2 ಮತ್ತು 3 ರವರ ಸಹಿವುಳ್ಳ ಚೀಟಿ ಅಂಟಿಸಲಾಯಿತು. ನಂತರ ಆರೋಪಿತನಿಗೆ ಸಿ ಆರ್ ಪಿಸಿ ಕಲಂ 41(ಎ) ರಡಿಯಲ್ಲಿ ವಿಚಾರಣೆಗೆ ಹಾಜರಾಗುವಂತೆ ತಿಳಿಸಿ ನೋಟಿಸು ನೀಡಿ ಸ್ಥಳದಲ್ಲಿಯೇ ಬಿಡುಗಡೆ ಮಾಡಲಾಯಿತು. ಪಂಚರಿಗೆ ಆರೋಪಿ ವಿರುದ್ದ ಪ್ರಕರಣ ದಾಖಲಿಸುವುದಾಗಿ ತಿಳಿಸಿ ಪಂಚರ ಸಮಕ್ಷಮ ಸ್ಥಳದಲ್ಲಿ ರಾತ್ರಿ 8.30 ರಿಂದ 9.30 ಗಂಟೆಯವರೆಗೆ ಸ್ಥಳ ಮಹಜರು ಜರುಗಿಸಿದೆನು. ಜಪ್ತಿ ಪಂಚನಾಮೆಯೊಂದಿಗೆ ಠಾಣೆಗೆ ಹಾಜರಾಗಿ ಆರೋಪಿ ವಿರುದ್ದ ದೂರನ್ನು ಸಲ್ಲಿಸಿ ಪ್ರ.ವ.ವರದಿ ಯನ್ನು ದಾಖಲಿಸಿ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾ ಸಾ 8 ರವರಿಗೆ ಹಸ್ತಾಂತರಿಸಿರುತ್ತೇನೆ

ಶೋಧನಾ ಸಮುಚಿತ ವರದಿಯನ್ನು ನೋಡುತ್ತಿದ್ದು ಈಗಾಗಲೇ ಅದನ್ನು ನಿ ಪಿ 2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ ಪಿ 2(ಸಿ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಈಗಾಗಲೇ ಅದನ್ನು ನಿ ಪಿ 1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ ಪಿ 1(ಡಿ) ಎಂದು ಗುರುತಿಸಲಾಯಿತು. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿ ಪಿ 3(ಎ) ಎಂದು ಗುರುತಿಸಲಾಯಿತು. ಮಾದರಿ ಶೀಲಿನ ನಕಲನ್ನು ನಿ ಪಿ 4 ಎಂದು, ಸಾಕ್ಷಿಯ ಸಹಿಯನ್ನು ನಿ ಪಿ 4(ಎ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿ ಪಿ 5 ಎಂದು, ಸಾಕ್ಷಿಯ ಸಹಿಯನ್ನು ನಿ ಪಿ 5(ಎ) ಎಂದು ಗುರುತಿಸಲಾಯಿತು.

ಸಾಕ್ಷಿ ಈ ದಿನ ನ್ಯಾಯಾಲಯದ ಮುಂದೆ ಇರುವ ಮು.ಮಾಲುಗಳನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ-1 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ಮು.ಮಾ-1 ಎ ಎಂದು ಗುರುತಿಸಲಾಯಿತು. ಸಾಕ್ಷಿ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

ಪಾಟೀ ಸವಾಲು **:** ಆರೋಪಿ ಪರ ಶ್ರೀ.ಎಸ್ ಎಂ ಯು ವಕೀಲರಿಂದ

ಘಟನೆಯ ದಿನ ಬೆಳಿಗ್ಗೆ 10.00 ಗಂಟೆಗೆ ನಾನು ನನ್ನ ಕಚೇರಿಗೆ ಹೋಗಿದ್ದೆನು. ಚುನಾವಣಾ ನೀತಿ ಸಂಹಿತೆ ಸಮಯದಲ್ಲಿ ಹಳ್ಳಿ, ತಾಲ್ಲೂಕು, ಜಿಲ್ಲೆಗಳಲ್ಲಿ ಪೋಲಿಸ್ ಬಂದೋಬಸ್ತ ಹಾಕಿರುತ್ತಾರೆ ಎಂದರೆ ಸರಿ. ನನ್ನನ್ನು ಆ ಕರ್ತವ್ಯಕ್ಕೆ ಹಾಕಿರಲಿಲ್ಲ. ಸುಮಾರು 10 ನಿಮಿಷಗಳವರೆಗೆ ಆ ದಿನ ಆ ಸಮಯದಲ್ಲಿ ಗಸ್ತು ಕರ್ತವ್ಯ ಮಾಡಿರುತ್ತೇನೆ. ನಾನು ಮತ್ತು ಚಾಸಾ-4 ರವರು ಪಂಚರನ್ನು ಕರೆದಿರುತ್ತೇವೆ. ಸಾಮಾನ್ಯವಾಗಿ ಅಂತಹ ಘಟನೆಗಳಲ್ಲಿ ಜನರು ಸೇರುತ್ತಾರೆ ಎಂದರೆ ಸರಿಯಲ್ಲ. ಘಟನಾ ಸ್ಥಳದ ಮನೆಯೊಳಗೆ ನಾನು ಮೊದಲು ಹೋದೆ. ಮು.ಮಾಲುಗಳನ್ನು ಹಾಕಿಟ್ಟ ಹಳದಿ ಚೀಲವನ್ನು ಜಪ್ತಿ ಮಾಡಿ ತನಿಖಾಧಿಕಾರಿಗೆ ಕೊಟ್ಟಿರುತ್ತೇನೆ. ಘಟನಾ ಸ್ಥಳದ ಚಕಬಂದಿ ಹೇಳಬಲ್ಲೆ. ಪೂರ್ವಕ್ಕೆ ಖಾಲಿ ಜಾಗ, ಪಶ್ಚಿಮಕ್ಕೆ ಖಾಲಿ ಜಾಗ, ಉತ್ತರಕ್ಕೆ ಕಚ್ಚಾ ರಸ್ತೆ, ದಕ್ಷಿಣಕ್ಕೆ ಖಾಲಿ ಜಾಗ.

ಮು.ಮಾಲುಗಳ ಮೇಲಿನ ಸಂಖ್ಯೆ ನೋಡಿ ಅವುಗಳು ಇಂತಹದೇ ಅಂಗಡಿಯದ್ದು ಅಂತಾ ಕಂಡು ಹಿಡಿಯಬಹುದಾಗಿತ್ತು ಎಂದರೆ ಸಾಕ್ಷಿಯು ಆದರೆ ಮು.ಮಾಲುಗಳ ಮೇಲೆ ಅಂತಹ ನಂಬರ ಇರಲಿಲ್ಲ ಎನ್ನುತ್ತಾರೆ. ಮೇಲೆ ಹೇಳಿದ ದಿನಾಂಕದಂದು ಮತ್ತು ಸ್ಥಳದಂದು ನಾನು ಗಸ್ತು ಕರ್ತವ್ಯದಲ್ಲಿದ್ದೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅಂಕಿ ಸಂಖ್ಯೆಗೋಸ್ಕರ ನಾನು ಯಾವುದೇ ದಾಳಿ ಮಾಡದೇ ಇದ್ದರೂ ಸಹ ದಾಳಿ ಮಾಡಿದ್ದೇನೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>: ಮರುವಿಚಾರಣೆ : ಇಲ್ಲ.</u>

**(** ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್